# ಬೆಳಗಾವಿ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ.,

ಮಹಾಂತೇಶನಗರ, ಬೆಳಗಾವಿ-590 017.

ಸಂಖ್ಯೆ:231/ಬೆಸಹಾಒ/ಆಡಳಿತ/ನೇಮಕಾತಿ/2017-18/1460 ದಿನಾಂಕ:13.07.2017

## ~:ನೇಮಕಾತಿ ಪ್ರಕಟಣೆ:~

ಬೆಳಗಾವಿ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,ಬೆಳಗಾವಿಗೆ ಈ ಕೆಳಕಂಡ ಹುದ್ದೆಗಳಿಗಾಗಿ ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ(ನಮೂನೆ ಇದರಡಿಯಲ್ಲಿ ಇಡಲಾಗಿದೆ) ಅರ್ಜಿಗಳನ್ನು ಅಹ್ವಾನಿಸಿದೆ. ಅರ್ಜಿಯನ್ನು ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಸ್ಪಷ್ಟವಾಗಿ ಬರೆದು ಅಥವಾ ಬೆರಳಚ್ಚು ಮಾಡಿಸಿ ರೂ.400=00 ಇತರೆ ವರ್ಗದವರಿಗೆ ಹಾಗೂ ಪ.ಜಾ/ಪ.ಪಂ, ಪ್ರವರ್ಗ1 ಹಾಗೂ ಬ್ಯಾಕಲಾಗ್ ಹುದ್ದೆ ಅಭ್ಯರ್ಥಿಗಳಿಗೆ ರೂ.200=00 ಮೌಲ್ಯದ ಡಿ.ಡಿ.ಯನ್ನು ವ್ಯವಸ್ಥಾಪಕ ನಿರ್ದೇಶಕರು, ಬೆಳಗಾವಿ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,ಬೆಳಗಾವಿ (ಬೆಳಗಾವಿಯಲ್ಲಿ ಸಂದಾಯವಾಗುವಂತೆ) ಇವರ ಹೆಸರಿಗೆ ಪಡೆದು ಅರ್ಜಿಯ ಜೊತೆ ಲಗತ್ತಿಸಬೇಕು. ಇತ್ತೀಚಿನ ಪಾಸಪ್ೋರ್ಟ್ ಅಳತೆಯ ಎರಡು (02) ಭಾವಚಿತ್ರಗಳನ್ನು ಅರ್ಜಿಯ ಮೆಲ್ಭಾಗದಲ್ಲಿ ಲಗತ್ತಿಸಿ ಎಲ್ಲ ದಾಖಲಾತಿಗಳನ್ನು ಒಳಗೊಂಡ ಲಕೋಟೆಯನ್ನು ಅಂಚೆ/ಕೋರಿಯರ್ ಮೂಲಕ ಮಾತ್ರ ವ್ಯವಸ್ಥಾಪಕ ನಿರ್ದೇಶಕರು, ಬೆಳಗಾವಿ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಮಹಾಂತೇಶನಗರ, ಬೆಳಗಾವಿ–590017 ಇವರ ವಿಳಾಸಕ್ಕೆ ದಿನಾಂಕ 16.08.2017 ರ ಸಂಜೆ 5 ಗಂಟೆಯೊಳಗಾಗಿ ತಲುಪುವಂತೆ ಕಳುಹಿಸಿಕೊಡತಕ್ಕದ್ದು. ಖುದ್ದಾಗಿ ಬರುವ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ. ನಿಗದಿತ ದಿನಾಂಕ ಮೀರಿ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಲಕೋಟೆಯ ಮೇಲೆ ಹುದ್ದೆಯ ಹೆಸರು ಹಾಗೂ ಮೀಸಲಾತಿ ಬರೆಯಬೇಕು ಮೀಸಲಾತಿ ನಿಯಮಗಳನ್ವಯ ವರ್ಗೀಕರಣ ಮಾಡಲಾದ ಹುದ್ದೆಗಳ ವಿವರಗಳು ಈ ಕೆಳಕಂಡಂತಿರುತ್ತವೆ

| ಕ್ರ. ಸಂ | ಹುದ್ದೆಯ ವಿವರ | ವೇತನ ಶ್ರೇಣಿ | ಒಟ್ಟು ಹುದ್ದೆಗಳ ಸಂಖ್ಯೆ | | ಮೀಸಲಾತಿ | | | | | | | |
|---|---|---|---|---|---|---|---|---|---|---|---|---|
| | | | | | ಪ.ಜಾ | ಪ.ಪಂ | ಪ್ರವ.1 | 2ಎ | 2ಬಿ | 3ಎ | 3ಬಿ | ಸಾಮಾನ್ಯ |
| 1 | ಉಪ ವ್ಯವಸ್ಥಾಪಕರು. (ವಿತ್ತ) | 30,400-51,300 | 01 | 01 | - | - | - | - | - | - | - | 01(ಇ) |
| 2 | ಸಹಾಯಕ ವ್ಯವಸ್ಥಾಪಕರು (ಎ.ಹೆಚ್.ಎಐ) | 28,100-50,100 | 8 | 10 | 01(ಮ) | - | 01(ಇ) | 01(ಇ) 01(ಮ) | 01(ಇ) | - | - | 02(ಗ್ರಾ) 01(ಮ) |
| | ಸಹಾಯಕ ವ್ಯವಸ್ಥಾಪಕರು (ಎಫ್ & ಎಫ್) | 28,100-50,100 | 2 | | - | - | - | - | - | - | - | 02(ಇ) |
| 3 | ತಾಂತ್ರಿಕ ಅಧಿಕಾರಿ (ಡಿಟಿ) | 22,800-43,200 | 5 | 8 | 01(ಮ) | - | 01(ಇ) | 01(ಇ) | - | - | - | 01(ಗ್ರಾ) 01(ಮ) |
| | ಮಾರುಕಟ್ಟೆ ಅಧಿಕಾರಿ. | 22,800-43,200 | 2 | | - | - | - | - | 01(ಇ) | - | - | 01(ಇ) |
| | ಎಂ.ಐ.ಎಸ್/ಸಿಸ್ಟಮ್ಅಧಿಕಾರಿ | 22,800-43,200 | 1 | | - | - | - | - | - | - | - | 01(ಮ) |
| 4 | A.ವಿಸ್ತರಣಾಧಿಕಾರಿದರ್ಜೆ-3 | 17,650-32,000 | 8 | 10 | 01(ಗ್ರಾ) 01(ಮ) | - | - | 01(ಇ) 01(ಮ) | 01(ಇ) | - | - | 01(ಇ) 01(ಮ) 01(ಗ್ರಾ) |
| | B.ಒಕ್ಕೂಟದ.ಹಾಲು ಉತ್ಪಾದಕರ ಸಹಕಾರಿ ಸಂಘಗಳ ಕಾರ್ಯದರ್ಶಿಗಳಿಂದ | 17,650-32,000 | 2 | | - | - | - | - | - | - | - | 01(ಇ) 01(ಮ) |
| 5 | ಆಡಳಿತ ಸಹಾಯಕ ದರ್ಜೆ-2 | 14,550-26,700 | 4 | 16 | 01(ಗ್ರಾ) | - | - | 01(ಮ) 01(ಅಂ.ವಿ) | - | - | - | 01(ಮ) |
| | ಕೆಮಿಸ್ಟ್ ದರ್ಜೆ-2 | 14,550-26,700 | 4 | | - | - | - | - | 01(ಇ) | - | 01(ಇ) | 01(ಗ್ರಾ) 01(ಮ) |
| | ಕಿರಿಯ ಸಿಸ್ಟಮ್ ಆಪರೇಟರ್ | 14,550-26,700 | 1 | | - | - | - | - | - | - | - | 01 (ಮಾ.ಸೈ) |
| | ಲೆಕ್ಕ ಸಹಾಯಕ ದರ್ಜೆ-2 | 14,550-26,700 | 3 | | 01(ಅಂ.ವಿ) | - | - | - | - | - | - | 02(ಇ) |
| | ಮಾರುಕಟ್ಟೆ ಸಹಾಯಕದರ್ಜೆ-2 | 14,550-26,700 | 4 | | 01(ಮ) | - | - | 01(ಗ್ರಾ) | - | 01(ಇ) | - | 01(ಗ್ರಾ) |
| 6 | ಕಿರಿಯ ತಾಂತ್ರಿಕರು I) ಫೀಟ್ಟರ್ | 11,600-21,000 | 2 | 06 | - | - | - | - | - | - | - | 01(ಮ) 01(ಇ) |
| | II) ಬಾಯ್ಲರ ಅಟೆಂಡೆಂಟ್ | 11,600-21,000 | 2 | | - | - | - | - | 01(ಇ) | - | - | 01(ಗ್ರಾ) |
| | Iil) ಇಲೇಕ್ಟ್ರೀಕಲ್/ಇಲೇಕ್ಟ್ರಾನಿಕ್ಸ್ | 11,600-21,000 | 2 | | 01(ಗ್ರಾ) | - | - | 01(ಮ) | - | - | - | - |
| 7 | ಸಹಾಯಕ ವ್ಯವಸ್ಥಾಪಕರು (ಎಹೆಚ್.ಎಐ) (ಬ್ಯಾಕಲಾಗ್) | 28,100-50,100 | 1 | | - | 01(ಇ) BL | - | - | - | - | - | - |
| | ಒಟ್ಟು | | 52 | | - | - | - | - | - | - | - | - |

ಇ–ಇತರೆ ಅಭ್ಯರ್ಥಿ, ಮ–ಮಹಿಳಾ ಅಭ್ಯರ್ಥಿ, ಗ್ರಾ– ಗ್ರಾಮೀಣ ಅಭ್ಯರ್ಥಿ, BL– ಬ್ಯಾಕಲಾಗ್, ಮಾ.ಸೈ.– ಮಾಜಿ ಸೈನಿಕ. ಅಂ.ವಿ– ಅಂಗವಿಕಲ

ಬ್ಯಾಕಲಾಗ್ ಹುದ್ದೆಗೆ ಅರ್ಜಿ ಸಲ್ಲಿಸುವವರು ಅರ್ಜಿಯ ಮೇಲೆ ಹಾಗೂ ಲಕೋಟೆಯ ಮೇಲೆ "ಬ್ಯಾಕಲಾಗ್ಹುದ್ದೆಗೆ" ಎಂದು ಬರೆಯುವುದು ಕಡ್ಡಾಯ.

- **ಬ್ಯಾಕ್‌ಲಾಗ್ ಹುದ್ದೆಗಳು**:- ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ ಡಿ.ಪಿ.ಆರ್./13/ಎಸ್.ಬಿ.ಸಿ/2001 ದಿನಾಂಕ:21–11–2001 ರ ಅನ್ವಯ ಆಯ್ಕೆಯನ್ನು ನೇರ ನೇಮಕಾತಿ ಮಾಡಲಾಗುವುದು.
- ಒಂದಕ್ಕಿಂತ ಹೆಚ್ಚಿನ ಹುದ್ದೆಗೆ ಅರ್ಜಿ ಸಲ್ಲಿಸುವವರು ಪ್ರತ್ಯೇಕವಾಗಿ ಅರ್ಜಿ ಸಲ್ಲಿಸುವುದು. ಒಂದು ಹುದ್ದೆಗೆ ಒಂದೇ ಅರ್ಜಿಯನ್ನು ಸಲ್ಲಿಸಬೇಕು.
- ಗ್ರಾಮೀಣ ಅಭ್ಯರ್ಥಿಯಾಗಿ ಅರ್ಜಿ ಸಲ್ಲಿಸುವರು 01 ರಿಂದ 10ನೇ ತರಗತಿಯವರೆಗೆ ಗ್ರಾಮೀಣ ಮೀಸಲಾತಿಗೆ ಒಳಪಡುವ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ನಿಗದಿತ ನಮೂನೆಯಲ್ಲಿ ಸಂಬಂಧಪಟ್ಟ ಶಿಕ್ಷಣ ಸಂಸ್ಥೆ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಯವರ ಸಹಿ ಮತ್ತು ಮೊಹರಿನೊಂದಿಗೆ ಧೃಡೀಕರಿಸಿದ ಪ್ರಮಾಣ ಪತ್ರವನ್ನು ಸಲ್ಲಿಸುವುದು.
- ಅಂಗವಿಕಲ ಮಿಸಲಾತಿಯಡಿ ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳು ಶೇ. 40 ಕ್ಕಿಂತ ಕಡಿಮೆ ಇಲ್ಲದಂತಹ ಅಂಗವಿಕಲತೆವುಳ್ಳ ಅಭ್ಯರ್ಥಿಗಳು ಮಾತ್ರ ಈ ಮಿಸಲಾತಿಯನ್ನು ಕೋರಲು ಅರ್ಹರು. ಸರ್ಕಾರಿ ಜಿಲ್ಲಾ ಆಸ್ಪತ್ರೆಯ ವೈದ್ಯಕೀಯ ಮಂಡಳಿಯಿಂದ ಅಂಗವಿಕಲತೆಯ ಬಗ್ಗೆ ಧೃಡೀಕರಿಸಿದ ಪ್ರಮಾಣ ಪತ್ರ ಲಗತ್ತಿಸಬೇಕು.
- **ಮಾಜಿ ಸೈನಿಕ ಅಭ್ಯರ್ಥಿ**:-

ಮಾಜಿ ಸೈನಿಕ ಎಂದರೆ ಕೇಂದ್ರ ಸಶಸ್ತ್ರ ದಳಗಳಾದ ಭೂದಳ,ನೌಕಾದಳ ಮತ್ತು ವಾಯುದಳದಲ್ಲಿ ಯಾವುದೇ ಶ್ರೇಣಿಯಲ್ಲಿ (ಯೋಧ ಅಥವಾ ಯೋಧನಲ್ಲದ) ಸೇವೆ ಸಲ್ಲಿಸಿದ ವ್ಯಕ್ತಿ.(ಪ್ರಮಾಣ ಪತ್ರ ಕಡ್ಡಾಯ) ಅಂತಹ ಸೇವೆಯಿಂದ ನಿವೃತ್ತಿ ಹೊಂದಿದ ನಂತರ ನಿವೃತ್ತಿ ವೇತನ ಪಡೆಯುತ್ತಿರುವ ವ್ಯಕ್ತಿ.

- ಅಭ್ಯರ್ಥಿಗಳು ಅರ್ಜಿಗಳಲ್ಲಿ ಅಪೂರ್ಣ ಮಾಹಿತಿಗಳನ್ನು ನೀಡಿದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

**ಮಿಸಲಾತಿಗಳು**:-

ಜಾತಿ/ ವರ್ಗ ಮಿಸಲಾತಿ ಕೋರಬಯಸುವ ಅಭ್ಯರ್ಥಿಗಳು ಇದಕ್ಕೆ ಸಂಬಂಧಿಸಿದಂತೆ, ಸರ್ಕಾರವು ನಿಗದಿಪಡಿಸಿರುವ ನಮೂನೆಗಳಲ್ಲಿ ಹಾಗೂ ಚಾಲ್ತಿಯಲ್ಲಿರುವ ಅಗತ್ಯಪ್ರಮಾಣ ಪತ್ರಗಳನ್ನು ಲಗತ್ತಿಸತಕ್ಕದ್ದು. ಶಿಕ್ಷಣಕ್ಕಾಗಿ/ ಇತರೆ ಸರ್ಕಾರಿ ಸೌಲಭ್ಯಕ್ಕಾಗಿ/ ಸಾಲಕ್ಕಾಗಿ ಪಡೆದಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ. ಪ್ರತಿಯೊಂದು ಪ್ರವರ್ಗದಲ್ಲಿ ಮೇಲಿನಂತೆ ಮೀಸಲಿಟ್ಟ ರಿಕ್ತ ಸ್ಥಾನಗಳಿಗೆ ಸೂಕ್ತ ಮಹಿಳಾ/ ಗ್ರಾಮೀಣ /ಮಾಜಿ ಸೈನಿಕ/ ಅಂಗವಿಕಲ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಅಂತಹ ಹುದ್ದೆಗಳನ್ನು ಆಯಾ ವರ್ಗದ ಇತರೆ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.ನೇಮಕಾತಿ ಪ್ರಕಟಣೆಯಲ್ಲಿ ಕ್ರಮ ಸಂಖ್ಯೆ 4 (B) ಯಲ್ಲಿ ನಮೂದಿಸಿದ ವಿಸ್ತರಣಾಧಿಕಾರಿ ದರ್ಜೆ–3 ಹುದ್ದೆಗಳಿಗೆ ಮಿಸಲಾತಿಯನ್ವಯ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಅದೇ ವರ್ಗದ ಕ್ರಮ ಸಂಖ್ಯೆ 4 (A) ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.

ಪದವಿ/ ಸ್ನಾತಕೋತ್ತರ ಪದವಿ ಎಂದರೆ ಅಭ್ಯರ್ಥಿಯು 10+2 ರ ವಿದ್ಯಾಭ್ಯಾಸದ ನಂತರ ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾಗಿರುವ ಯಾವುದೇ ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವಿ (Regular) ಪಡೆದ ಕನಿಷ್ಠ ಮೂರು ವರ್ಷಗಳ ಅವಧಿಯ ಸಾಂಪ್ರದಾಯಿಕ ಪದವಿ (Regular) ಅಂದರೆ 10+2+3 ಮತ್ತು ಎರಡು ವರ್ಷ ಅವಧಿಯ ಸ್ನಾತಕೋತ್ತರ ಪದವಿ (Regular) ಅಂದರೆ 10+2+3+2 ರಂತೆ ವ್ಯಾಸಂಗ ಮಾಡಿರಬೇಕು.

**(I) ಕನಿಷ್ಟ ವಿದ್ಯಾರ್ಹತೆ:**

1) **ಉಪ ವ್ಯವಸ್ಥಾಪಕರು (ವಿತ್ತ)**:- ಮಾನ್ಯತೆ ಪಡೆದ ವಿಶ್ವವಿದ್ಯಾಲಯದ ಪದವಿಯೊಂದಿಗೆ (Regular) Inter C.A (Institute of Charted Accounts) /Inter ICWA (Institute of cost Accounts) ಜೊತೆಗೆ ಬೃಹತ ಉದ್ದಿಮೆ/ ಸಾರ್ವಜನಿಕ ಉದ್ದಿಮೆ / ಸರ್ಕಾರಿ ಸಂಸ್ಥೆಗಳಲ್ಲಿ 5 ವರ್ಷ ಕೆಲಸ ನಿರ್ವಹಿಸಿದ ಅನುಭವ ಹೊಂದಿರಬೇಕು. 5 ವರ್ಷ ಅನುಭವ ಪಡೆದ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಕ್ರಮವಾಗಿ 4,3,2,1 ವರ್ಷ ಅನುಭವ ಇರುವ ಅಭ್ಯರ್ಥಿಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದು.

2) **ಸಹಾಯಕ ವ್ಯವಸ್ಥಾಪಕರು(ಎ.ಎಚ್/ಎ.ಐ)**:- ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಬಿ.ವ್ಹಿ.ಎಸ್.ಸಿ ಪದವಿ (Regular) ಮತ್ತು ಕರ್ನಾಟಕ ವೆಟೆರನರಿ ಕೌನ್ಸಿಲ್ ನೊಂದಣಿ ಪ್ರಮಾಣ ಪತ್ರದ ಜೊತೆಗೆ ಗಣಕೀಕೃತ ಪ್ಯಾಕೇಜ್‌ಗಳ ನಿರ್ವಹಣೆಯ ಜ್ಞಾನ ಹೊಂದಿರಬೇಕು.

3) **ಸಹಾಯಕ ವ್ಯವಸ್ಥಾಪಕರು(ಎಫ್.&ಎಫ್)**:- ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಬಿ.ಎಸ್.ಸಿ (Agri) ಪದವಿ (Regular) ಜೊತೆಗೆ ಗಣಕೀಕೃತ ಪ್ಯಾಕೇಜ್‌ಗಳಲ್ಲಿ ನಿರ್ವಹಣೆಯ ಜ್ಞಾನ ಹೊಂದಿರಬೇಕು.

4) **ತಾಂತ್ರಿಕ ಅಧಿಕಾರಿ(ಡಿ.ಟಿ)**:- ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ B.Sc (DT) / B.Tech (Dairy Tech) ಪದವಿಯೊಂದಿಗೆ ಗಣಕೀಕೃತ ಪ್ಯಾಕೇಜ್‌ಗಳ ನಿರ್ವಹಣೆಯ ಜ್ಞಾನ ಹೊಂದಿರಬೇಕು.

5) **ಮಾರುಕಟ್ಟೆ ಅಧಿಕಾರಿ**:- ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ MBA (Marketing) ಸ್ನಾತಕೋತ್ತರ ಪದವಿ (Regular) ಜೊತೆಗೆ 2 ವರ್ಷದ FMCG (Fast moving consumer goods) ಅನುಭವ ಮತ್ತು ಗಣಕೀಕೃತ ಪ್ಯಾಕೇಜಗಳ ನಿರ್ವಹಣೆಯ ಜ್ಞಾನ ಹೊಂದಿರಬೇಕು.

6) **ಎಮ್.ಐ.ಎಸ್/ಸಿಸ್ಟಮ್ ಅಧಿಕಾರಿ**:- ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ MCA ಪದವಿ (Regular) ಜೊತೆಗೆ ಆಫೀಸ್ ಪ್ಯಾಕೇಜ್ ಗಣಕಯಂತ್ರ ಹಾಗೂ ಸ್ವತಂತ್ರವಾಗಿ Software Development ಅಭಿವೃದ್ಧಿಪಡಿಸುವ ಸಾಮರ್ಥ್ಯ ಮತ್ತು ನಿರ್ವಹಣೆಯ 2 ವರ್ಷದ ಅನುಭವ ಹೊಂದಿರಬೇಕು.

7) A.**ವಿಸ್ತರಣಾಧಿಕಾರಿ ದರ್ಜೆ-3** :- ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಬಿಎ/ಬಿಎಸ್.ಸಿ./ಬಿಕಾಮ್/ ಬಿ.ಬಿ.ಎಮ್/ಬಿಬಿಎ/ full time Degree ಪದವಿ (Regular) ಜೊತೆಗೆ ಗಣಕಯಂತ್ರದ ನಿರ್ವಹಣೆಯ ಮೂಲ ಜ್ಞಾನ ಹೊಂದಿರಬೇಕು.

7) B. **ವಿಸ್ತರಣಾಧಿಕಾರಿ ದರ್ಜೆ-3** :- ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಯಾವುದೇ ಪದವಿ ಹೊಂದಿ ಒಕ್ಕೂಟದ ವ್ಯಾಪ್ತಿಯ ಹಾಲು ಉತ್ಪಾದಕರ ಸಹಕಾರಿ ಸಂಘದಲ್ಲಿ ಕನಿಷ್ಠ 5 ವರ್ಷ ಕಾರ್ಯದರ್ಶಿಯಾಗಿ ಕಳಂಕ ರಹಿತ ಸೇವೆ ಸಲ್ಲಿಸಿದ ಅನುಭವದೊಂದಿಗೆ ಗಣಕಯಂತ್ರದ ನಿರ್ವಹಣೆಯ ಕನಿಷ್ಠ ಜ್ಞಾನ ಹೊಂದಿರಬೇಕು. ಅನುಭವ ದೃಢೀಕರಣಕ್ಕೆ ಸಂಬಂಧಪಟ್ಟ ಸಂಘದ ಅಧ್ಯಕ್ಷರು ಸಹಿ ಮಾಡಿದ ಪ್ರಮಾಣ ಪತ್ರಕ್ಕೆ ಒಕ್ಕೂಟದ ಕ್ಷೇತ್ರ ವಿಭಾಗಾಧಿಕಾರಿಗಳ ಮೇಲು ರುಜು ಇರಬೇಕು.

8) **ಆಡಳಿತ ಸಹಾಯಕ ದರ್ಜೆ-2** :- ಮಾನ್ಯತೆ ಪಡೆದ ವಿಶ್ವವಿದ್ಯಾಲಯದ ಯಾವುದೇ ಪದವಿ (Regular) ಯೊಂದಿಗೆ ಗಣಕಯಂತ್ರದ ನಿರ್ವಹಣೆಯ ಮೂಲ ಜ್ಞಾನ ಹೊಂದಿರಬೇಕು.

9) **ಕೆಮಿಸ್ಟ್ ದರ್ಜೆ-2** :- ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ B.Sc ಪದವಿ (Regular) chemistry/ Microbiology ಒಂದು ವಿಷಯವನ್ನಾಗಿ ಅಭ್ಯಾಸ ಮಾಡಿರಬೇಕು ಮತ್ತು ಗಣಕಯಂತ್ರದ ನಿರ್ವಹಣೆಯ ಮೂಲ ಜ್ಞಾನ ಹೊಂದಿರಬೇಕು.

10) **ಜೂನಿಯರ್ ಸಿಸ್ಟಮ್ ಆಪರೇಟರ್**: ಮಾನ್ಯತೆ ಪಡೆದ ವಿಶ್ವವಿದ್ಯಾಲಯದ BCA/B.Sc computer science ಪದವಿ (Regular) ಹೊಂದಿರಬೇಕು.

11) **ಲೆಕ್ಕ ಸಹಾಯಕ ದರ್ಜೆ-2** :- ಮಾನ್ಯತೆ ಪಡೆದ ವಿಶ್ವವಿದ್ಯಾಲಯದ ಬಿ.ಕಾಮ್ ಪದವಿ (Regular)ಯೊಂದಿಗೆ ಗಣಕಯಂತ್ರದ ಮತ್ತು ಟ್ಯಾಲಿ

12) **ಮಾರುಕಟ್ಟೆ ಸಹಾಯಕ ದರ್ಜೆ-2** :- ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಬಿಕಾಮ್/ಬಿಬಿಎಮ್/ಬಿಬಿಎ full time Degree ಪದವಿ (Regular) ಜೊತೆಗೆ ಗಣಕಯಂತ್ರದ ನಿರ್ವಹಣೆಯ ಮೂಲ ಜ್ಞಾನ ಹೊಂದಿರಬೇಕು.

13) **ಕಿರಿಯ ತಾಂತ್ರಿಕರು**:- ಎಸ್.ಎಸ್.ಎಲ್.ಸಿ.ಉತ್ತೀರ್ಣತೆಯೊಂದಿಗೆ ಉದ್ಯೋಗ ಮತ್ತು ತರಬೇತಿ ಇಲಾಖೆಯ, ಮಾನ್ಯತೆ ಪಡೆದ ಸಂಸ್ಥೆಯಿಂದ/ ಎನ್.ಟಿ.ಸಿಯಿಂದ ಫಿಟ್ಟರ್/ ಇಲೇಕ್ಟ್ರಿಕಲ್/ಇಲೇಕ್ಟ್ರಾನಿಕ್ಸ್ ಟ್ರೇಡನಲ್ಲಿ ಐಟಿಐ ವಿದ್ಯಾರ್ಹತೆ ಹೊಂದಿರಬೇಕು. ಬಾಯ್ಲರ್ ಅಟೆಂಡೆಂಟ್‌ಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ. ಉತ್ತೀರ್ಣತೆಯೊಂದಿಗೆ ನಿರ್ದೇಶಕರು (ಕಾರ್ಖಾನೆ ಮತ್ತು ಬಾಯ್ಲರ್) ರವರಿಂದ ಬಾಯ್ಲರ್ ಅಟೆಂಡೆಂಟ್ ದರ್ಜೆ–2 ರ ಪ್ರಮಾಣ ಪತ್ರ ಹೊಂದಿರಬೇಕು.

**(II) ವಯೋಮಿತಿ** :-

| ವರ್ಗೀಕರಣದ ವಿವರ | ಕನಿಷ್ಠ | ಗರಿಷ್ಠ |
|---|---|---|
| ಸಾಮಾನ್ಯ ವರ್ಗ | 18 | 35 ವರ್ಷ |
| 2ಎ, 2ಬಿ, 3ಎ, 3ಬಿ | 18 | 38 ವರ್ಷ |
| ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1 | 18 | 40 ವರ್ಷ |

ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕಕ್ಕೆ ಮೇಲ್ಕಂಡ ವಯೋಮಿತಿಯೊಳಗೆ ಇರಬೇಕು. ಹಾಗೂ ಹುದ್ದೆಗಳಿಗೆ ನಿಗದಿಪಡಿಸಿದ ವಿದ್ಯಾರ್ಹತೆಯನ್ನು ಹೊಂದಿರಬೇಕು.

**ವಯೋಮಿತಿ ಸಡಿಲಿಕೆ** :- ಒಕ್ಕೂಟದ ಅನುಮೋದಿತ ವೃಂದ ಮತ್ತು ನೇಮಕಾತಿ ನಿಯಮದಂತೆ ಕೆಳಕಂಡ ಮಿಸಲಾತಿ ಅಭ್ಯರ್ಥಿಗಳಿಗೆ ವಯೋಮಿತಿಯಲ್ಲಿ ಸಡಿಲಿಕೆ ಇರುತ್ತದೆ.

1. **ಅಂಗವಿಕಲರು**:- 10 ವರ್ಷ ವಯೋಮಿತಿಯಲ್ಲಿ ಸಡಿಲಿಕೆ.
2. **ವಿಧವೆಯರು** :- 10 ವರ್ಷ ವಯೋಮಿತಿಯಲ್ಲಿ ಸಡಿಲಿಕೆ.
3. **ಮಾಜಿ ಸೈನಿಕರು**:- ಕೇಂದ್ರ ಸಶಸ್ತ್ರ ದಳದಲ್ಲಿ ಸಲ್ಲಿಸಿದ ಸೇವಾ ಅವಧಿಯಷ್ಟು ವಯೋಮಿತಿಯಲ್ಲಿ ಸಡಿಲಿಕೆ.

ವಯೋಮಿತಿ ಸಡಿಲಿಕೆಗೆ ಅವಶ್ಯಕ ದಾಖಲಾತಿಗಳನ್ನು ಲಗತ್ತಿಸುವುದು.

**(III) ಆಯ್ಕೆ ವಿಧಾನ**:-

ಹುದ್ದೆಗಳಿಗೆ ನಿಗದಿಪಡಿಸಿದ ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಗಳನ್ನು ಶೇ.85 ಕ್ಕೆ ಮಿತಿಗೊಳಿಸಿ, ಇದರಿಂದ ಪ್ರಾಪ್ತವಾಗುವ ಅಂಕಗಳ ಆಧಾರದ ಮೇಲೆ (ಮೆರಿಟ್) ಅಭ್ಯರ್ಥಿಗಳನ್ನು 1 : 5 ರ ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯಲಾಗುವುದು. ಸಂದರ್ಶನಕ್ಕೆ 15 ಅಂಕಗಳನ್ನು ನಿಗದಿಪಡಿಸಲಾಗಿದೆ. ಸಂದರ್ಶನದಲ್ಲಿ ಗಳಿಸಿದ ಅಂಕಗಳನ್ನು ಶೇ.15ಕ್ಕೆ ಮಿತಿಗೊಳಿಸಿ, ನಿಗದಿಪಡಿಸಿದ ವಿದ್ಯಾರ್ಹತೆಯಲ್ಲಿ ಹಾಗೂ ಸಂದರ್ಶನದಲ್ಲಿ ಗಳಿಸಿದ ಅಂಕಗಳನ್ನು ಒಟ್ಟುಗೂಡಿಸಿ ಅಂತಿಮವಾಗಿ ಮೆರಿಟ್ ಆಧಾರದಲ್ಲಿ ಆಯ್ಕೆ ಮಾಡಲಾಗುವುದು. ಸಹಕಾರ ವಿಷಯದಲ್ಲಿ ಸ್ನಾತಕೋತ್ತರ ಪದವಿ/ಪದವಿ/ಡಿಪ್ಲೋಮಾ ಅರ್ಹತೆ ಹೊಂದಿದ್ದಲ್ಲಿ ಒಂದು ವಿಶೇಷ ಕೃಪಾಂಕವನ್ನು ನೀಡಲಾಗುವುದು. ಸಂದರ್ಶನಕ್ಕೆ ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗಬೇಕು. ಅಭ್ಯರ್ಥಿಗಳ ಅರ್ಹತೆ ಬಗ್ಗೆ ಒಕ್ಕೂಟದ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದ ನಿರ್ಣಯವೇ ಅಂತಿಮವಾಗಿರುತ್ತದೆ. ಇದಕ್ಕೆ ಅಭ್ಯರ್ಥಿಯು ಬದ್ದರಾಗಿರಬೇಕು.

**ಸಾಮಾನ್ಯ ನಿಬಂಧನೆಗಳು** :-

ಅಭ್ಯರ್ಥಿಯು ಭಾರತೀಯ ಪ್ರಜೆಯಾಗಿರಬೇಕು. ಕನ್ನಡ ಭಾಷಾಜ್ಞಾನ(ಓದುವುದು ಮತ್ತು ಬರೆಯುವುದು) ಕಡ್ಡಾಯವಾಗಿರುತ್ತದೆ. ಈ ನೇಮಕಾತಿ ಪ್ರಕಟಣೆಯನ್ನು ಅನಿವಾರ್ಯ ಕಾರಣಗಳಿಂದ ಹಿಂದಕ್ಕೆ ಪಡೆಯುವ / ರದ್ದುಪಡಿಸುವ/ ನೇಮಕಾತಿ ಆದೇಶಗಳನ್ನು ನೀಡುವ ಮುನ್ನ ಯಾವುದೇ ಹಂತದಲ್ಲಿ / ಯಾವುದೇ ಕಾರಣ/ಮಾಹಿತಿ ನೀಡದೇ ಈ ನೇಮಕಾತಿ ಪ್ರಕ್ರೀಯೆಯನ್ನು ಮುಂದೂಡುವ /ರದ್ದುಪಡಿಸುವ ಅಧಿಕಾರವನ್ನು ಒಕ್ಕೂಟವು ಕಾಯ್ದಿರಿಸಿಕೊಂಡಿರುತ್ತದೆ. ನೇಮಕಾತಿ ಪ್ರಕಟಣೆಯನ್ನು ರದ್ದುಪಡಿಸಿದಲ್ಲಿ ಅರ್ಜಿ ಶುಲ್ಕವನ್ನು ಹಿಂದಿರುಗಿಸಲಾಗುವದಿಲ್ಲ. ಅಭ್ಯರ್ಥಿಗಳು ನಿಗದಿಪಡಿಸಿದ ವಿದ್ಯಾರ್ಹತೆಯೊಂದಿಗೆ ಸಂಬಂಧಿಸಿದಂತೆ ಎಲ್ಲಾ ವಿಷಯಗಳು ಮತ್ತು ಎಲ್ಲಾ ವರ್ಷಗಳ / ಎಲ್ಲಾ ಸಮಿಸ್ಟರ್ ಒಳಗೊಂಡು ಅಂಕಪಟ್ಟಿಗಳ ಜೊತೆಗೆ ಜನ್ಮ ದಿನಾಂಕ / ಜಾತಿ/ಅನುಭವ ಪ್ರಮಾಣಪತ್ರ / ಗಣಕಯಂತ್ರ ನಿರ್ವಹಣೆಯಲ್ಲಿ ಸಂಬಂಧಪಟ್ಟ ಹುದ್ದೆಗಳಿಗೆ ನಿಗದಿಪಡಿಸಿದ ಜ್ಞಾನಹೊಂದಿರುವ ಪ್ರಮಾಣಪತ್ರ ಮತ್ತು ಇತ್ಯಾದಿ ಸಂಬಂಧಿಸಿದ ದಾಖಲಾತಿಯ ಪ್ರತಿಗಳನ್ನು ಸ್ವಯಂ ಧೃಡೀಕರಣದೊಂದಿಗೆ (Self attested) ಕಡ್ಡಾಯವಾಗಿ ಲಗತ್ತಿಸಬೇಕು. ಸಂಪೂರ್ಣ ಮಾಹಿತಿ ಒಳಗೊಂಡಿರದ ಹಾಗೂ ಅಗತ್ಯ ಪ್ರಮಾಣ ಪತ್ರಗಳು/ಭಾವಚಿತ್ರಗಳು ಅರ್ಜಿ ಶುಲ್ಕವಿಲ್ಲದ ಅರ್ಜಿಗಳನ್ನು ಯಾವುದೇ ಸೂಚನೆ ನೀಡದೆ ತಿರಸ್ಕರಿಸಲಾಗುವುದು.

ಸಹಿ/–

ವ್ಯವಸ್ಥಾಪಕ ನಿರ್ದೇಶಕರು.

ಬೆಳಗಾವಿ ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ಬೆಳಗಾವಿ

## ಅರ್ಜಿ ನಮೂನೆ

ಭಾವ ಚಿತ್ರಕ್ಕೆ ಸಹಿ ಮಾಡಿ ಲಗತ್ತಿಸುವುದು

ಹುದ್ದೆಯ ಹೆಸರು :..........................................................................................

| | | |
|---|---|---|
| 1. | ಅಭ್ಯರ್ಥಿಯ ಹೆಸರು (ದಪ್ಪ ಅಕ್ಷರಗಳಲ್ಲಿ) | |
| 2. | ತಂದೆಯ ಹೆಸರು | |
| 3. | a) ವಿಳಾಸ (ಖಾಯಂ) (ಪಿನ ಕೋಡ್‌ದೊಂದಿಗೆ) | |
| | b) ವಿಳಾಸ (ಪತ್ರ ವ್ಯವಹಾರಕ್ಕಾಗಿ) (ಪಿನಕೋಡ್‌ದೊಂದಿಗೆ)ಮೋ.ನಂ | |
| 4. | ಜನ್ಮ ದಿನಾಂಕ ವಯಸ್ಸು (ಅರ್ಜಿ ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕಕ್ಕೆ ಇದ್ದಂತೆ.) | ದಿನಾಂಕ ---------ತಿಂಗಳು ------ವರ್ಷ |
| 5. | ರಾಷ್ಟ್ರೀಯತೆ, ಜನ್ಮ ಸ್ಥಳ | |
| 6. | a) ಜಾತಿ/ ಉಪಜಾತಿ ಪ್ರವರ್ಗ<br>b) ಸರ್ಕಾರಿ ಮಿಸಲಾತಿ ನಿಯಮಗಳನ್ವಯ ಕ್ಲೇಮು ಪಡೆಯಲು ಇಚ್ಚಿಸಿದಲ್ಲಿ ಸೂಕ್ತವಾಗಿ ಗೆರೆ ಎಳೆದು ಗುರುತಿಸತಕ್ಕದ್ದು, (ಇದಕ್ಕೆ ಸಂಬಂಧಿಸಿದಂತೆ ಸರ್ಕಾರವು ಇತ್ತೀಚೆಗೆ ನಿಗದಿಪಡಿಸಿರುವ ನಮೂನೆ ಡಿ.ಇ.ಎಫ್ ಮತ್ತು ನಮೂನೆ-2 ರಲ್ಲಿ ಅಗತ್ಯ ಪ್ರಮಾಣ ಪತ್ರವನ್ನು ಲಗತ್ತಿಸತಕ್ಕದ್ದು.) | ಪ.ಜಾ./ಪ.ಪಂ/ಪ್ರ–1/2A/2B/3A/3B<br>ಸಾಮನ್ಯ ವರ್ಗ/ ಗ್ರಾಮೀಣ/ಅಂಗವಿಕಲ/ಮಾಜಿ ಸೈನಿಕ |
| 7. | ಲಿಂಗ | ಪುರುಷ/ಮಹಿಳೆ |
| 8. | ವಿದ್ಯಾರ್ಹತೆ (ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆ ಮಾತ್ರ ನಮೂದಿಸುವುದು) ಅಭ್ಯರ್ಥಿಯು ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಎಲ್ಲಾ ವಿಷಯಗಳ/ವರ್ಷಗಳ ಅಂಕಪಟ್ಟಿಯ ಪ್ರತಿಗಳನ್ನು ಕಡ್ಡಾಯವಾಗಿ ಲಗತ್ತಿಸುವುದು. ಅಪೂರ್ಣ ಮಾಹಿತಿ/ಅಗತ್ಯ ಅಂಕಪಟ್ಟಿಗಳಿಲ್ಲದ ಅರ್ಜಿಗಳನ್ನು ಯಾವುದೇ ಸೂಚನೆ ನೀಡದೆ ತಿರಸ್ಕರಿಸಲಾಗುವುದು. | ಸಾಮಾನ್ಯ ವಿದ್ಯಾರ್ಹತೆ:-______________________<br>ಮಾನ್ಯತೆ ಪಡೆದ ವಿಶ್ವವಿದ್ಯಾಲಯ/ ಮಂಡಳಿ ಹೆಸರು_______________<br>ಒಟ್ಟು ಅಂಕಗಳು _______ಗಳಿಸಿದ ಅಂಕಗಳು ______<br>ಶೇಕಡಾವಾರು ಅಂಕ ________<br>ವೃತ್ತಿಪರ ವಿದ್ಯಾರ್ಹತೆ ________________<br>ಮಾನ್ಯತೆ ಪಡೆದ ವಿಶ್ವವಿದ್ಯಾಲಯ/ ಮಂಡಳಿಯ ಹೆಸರು _________________<br>ಒಟ್ಟು ಅಂಕಗಳು _________ಗಳಿಸಿದ ಅಂಕಗಳು _____<br>ಶೇಕಡಾವಾರು ಅಂಕ _______ |
| 9. | ಸೇವಾನುಭವ (ಅಗತ್ಯ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಲಗತ್ತಿಸುವುದು.) | ಕಾರ್ಯನಿರ್ವಹಿಸಿದ ಅವಧಿ_____ರಿಂದ_______ವರೆಗೆ<br>ಸಂಸ್ಥೆಯ ಹೆಸರು _________ ಸಂಸ್ಥೆಯ ವಾರ್ಷಿಕ ವಹಿವಾಟು ------ |
| 10. | ಪ್ರಸ್ತುತ ಸೇವೆಯಲ್ಲಿದ್ದರೆ ಅಭ್ಯರ್ಥಿಯು ಪ್ರಮಾಣ ಪತ್ರದ ಜೊತೆಗೆ ಅರ್ಜಿಯನ್ನು ಕ್ರಮಬದ್ದ ಮಾರ್ಗವಾಗಿ ಕಳುಹಿಸತಕ್ಕದ್ದು. | ಸಂಸ್ಥೆಯ ಹೆಸರು ____________ಧಾರಣ ಮಾಡಿದ ಹುದ್ದೆ______ಸಂಸ್ಥೆಯ ವಾರ್ಷಿಕ ವಹಿವಾಟು _________ |
| 11. | ಲಗತ್ತಿಸಿದ ಡಿ.ಡಿ.ವಿವರಗಳು | ಡಿ.ಡಿ.ಸಂಖ್ಯೆ_______ಮತ್ತು ದಿನಾಂಕ________<br>ಡಿ.ಡಿ ಮೊತ್ತ _______<br>ಖರೀದಿಸಿದ ಬ್ಯಾಂಕ್ ಹೆಸರು/ ಶಾಖೆ______ |
| 12. | ಅಭ್ಯರ್ಥಿಯು ನೀಡುವ ಇತರೆ ಯಾವುದೇ ಉಪಯುಕ್ತ ಮಾಹಿತಿಗಳು | |

### ~:ಘೋಷಣೆ:~

ಈ ಅರ್ಜಿಯಲ್ಲಿ ನೀಡಿದ ಮಾಹಿತಿಗಳು ನಿಜ ಮತ್ತು ಸತ್ಯವಾಗಿದೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ. ಮತ್ತು ಯಾವುದೇ ಹಂತದಲ್ಲಿ ಇವು ಅಸತ್ಯ ಎಂದು ಕಂಡು ಬಂದಲ್ಲಿ ಅಥವಾ ವಾಸ್ತವಾಂಶಗಳನ್ನು ಮುಚ್ಚಿಡಲು ಉದ್ದೇಶಪೂರ್ವಕವಾಗಿ ನಾನು ಪ್ರಯತ್ನಿಸಿದ್ದೇನೆ ಎಂದು ಕಂಡು ಬಂದಲ್ಲಿ ನನ್ನ ಅಭ್ಯರ್ಥಿತನವನ್ನು ತಕ್ಷಣ ನಿರಾಕರಿಸಬಹುದಾಗಿದೆ ಮತ್ತು ಸಂಸ್ಥೆಯ ಸೇವೆಯಲ್ಲಿದ್ದಲ್ಲಿ ನನ್ನನ್ನು ವಜಾಗೊಳಿಸಬಹುದಾಗಿದೆ.

ಅಭ್ಯರ್ಥಿಯ ಸಹಿ ಮತ್ತು ಹೆಸರು.

ದಿನಾಂಕ:

ಸ್ಥಳ :